# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಎಮ್‌ವೈಎಸ್/1749/2021
ಪಿಒ/ಎ.ಆರ್.ಇ–2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:28/12/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಮಾರನಚಾಕನಹಳ್ಳಿ ಗ್ರಾಮ ಪಂಚಾಯತ್, ಸೆಕ್ರೆಟರಿ ಗ್ರೇಡ್–2 (ಪ್ರಭಾರ ಪಿಡಿಓ), ಜಿ.ಬಿ. ರಾಮಚಂದ್ರ, ಬಿನ್ ಲೇಟ್ ಎಸ್. ಬೋರಯ್ಯ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ವಲಯ, ಮೈಸೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಮಂಡ್ಯ ಜಿಲ್ಲೆ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ ಜಿ.ಬಿ. ರಾಮಚಂದ್ರ, ಬಿನ್ ಲೇಟ್ ಎಸ್. ಬೋರಯ್ಯ, ಸೆಕ್ರೆಟರಿ ಗ್ರೇಡ್–2 (ಪ್ರಭಾರ ಪಿಡಿಓ), ಮಾರನಚಾಕನಹಳ್ಳಿ ಗ್ರಾಮ ಪಂಚಾಯತ್, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಜವರೇಗೌಡ, ಬಿನ್ ಲೇಟ್ ಮಂಚೇಗೌಡ, ಮಾದೇಗೌಡನಕೊಪ್ಪಲು ಗ್ರಾಮ, ದುದ್ದ ಹೋಬಳಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಮಂಡ್ಯ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ: 08/2017 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ಮಂಡ್ಯ ತಾಲ್ಲೂಕು, ದುದ್ದ ಹೋಬಳಿ, ಮಾರನಚಾಕನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಪುಟ್ಟಕೊಪ್ಪಲು ಗ್ರಾಮದಲ್ಲಿ ಸಾರ್ವಜನಿಕರು ಕುಡಿಯುವ ನೀರಿನ ಕಿರುನೀರು ಸರಬರಾಜು ಯೋಜನೆಯ ಕೊಳವೆಬಾವಿಯ ಜಲವು ಬತ್ತಿ ಹೋಗಿದ್ದು, ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆಯಾಗಿರುವುದರಿಂದ ಮಾರನಚಾಕನಹಳ್ಳಿ ಗ್ರಾಮ ಪಂಚಾಯತಿ ಕಾರ್ಯಾಲಯದ ಆದೇಶ ಸಂ.ಗ್ರಾ.ಪಂ.ಸಂ.48/2017–18 ದಿನಾಂಕ: 07/08/2017ರಲ್ಲಿ ದೂರುದಾರರಿಗೆ ದಿನಾಂಕ: 25/07/2017ರಿಂದ ಮುಂದೆ ತಿಳಿಸುವವರೆಗೆ ಬೆಳಿಗ್ಗೆ ಸಾಯಂಕಾಲ ಒಂದೊಂದು ಟ್ರಾಕ್ಟರ್ ಶುದ್ಧ ನೀರನ್ನು ಸರಬರಾಜು ಮಾಡುವಂತೆ ಆದೇಶ ನೀಡಿದ್ದು, ಅದರಂತೆ ದೂರುದಾರರು ತನ್ನ ಟ್ರಾಕ್ಟರ್ ನಂ.ಕೆಎ.–11–ಟಿ–6360ರಿಂದ ದಿನಾಂಕ:25/07/2017ರಿಂದ 10/08/2017ರವರೆಗೆ ಒಟ್ಟು 17–ದಿವಸಗಳು

ಬೆಳಿಗ್ಗೆ ಸಾಯಂಕಾಲ ಒಂದೊಂದು ಟ್ರಾಕ್ಟರ್ ಶುದ್ಧ ನೀರನ್ನು ಸರಬರಾಜು ಮಾಡಿದ್ದು, ಅಲ್ಲಿಯವರೆಗೆ ಮಾರನಚಾಕನಹಳ್ಳಿ ಗ್ರಾಮ ಪಂಚಾಯತಿ ಕಾರ್ಯಾಲಯದಿಂದ ಕುಡಿಯುವ ನೀರಿನ ಬಿಲ್‌ನ್ನು ಮಂಜೂರು ಮಾಡಿಕೊಡದೇ ಇರುವುದರಿಂದ ದಿನಾಂಕ: 10/08/2017ರಂದು ಸಂಜೆ ಪುಟ್ಟಕೊಪ್ಪಲು ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ನಿಲ್ಲಿಸಿರುತ್ತಾರೆ. ಅದರಂತೆ ಸದರಿ ನೀರಿನ ಸರಬರಾಜಿನ ಬಿಲ್‌ನ್ನು ಮಂಜೂರು ಮಾಡಿಕೊಡುವಂತೆ ಮಾರನಚಾಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಪ್ರಭಾರ ಪಿಡಿಓರವರಾದ ಎದುರುದಾರರನ್ನು ಹಲವರು ಬಾರಿ ಭೇಟಿ ಮಾಡಿ ಮನವಿ ಮಾಡಿದಾಗ, ಸದರಿಯವರು ಆಗ ಈಗ ಮಾಡಿಕೊಡುತ್ತೇನೆಂದು ಸಬೂಬು ಹೇಳುತ್ತಿದ್ದು, ದಿನಾಂಕ: 13/09/2017ರಂದು ಸುಮಾರು 1–30 ಗಂಟೆಯಲ್ಲಿ ಮಾರನಚಾಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಪ್ರಭಾರ ಪಿಡಿಓರವರಾದ ಎದುರುದಾರರು ಅವರ ಮೊಬೈಲ್ ನಂ.9591273242ರಿಂದ ದೂರುದಾರರ ಮೊಬೈಲ್ ನಂ.9880490803ನೇದ್ದಕ್ಕೆ ಕರೆ ಮಾಡಿ ಪುಟ್ಟಕೊಪ್ಪಲು ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಮಾಡಿರುವ ಬಿಲ್‌ನ ಒಟ್ಟು ಮೊತ್ತ ರೂ.30,600/– ಗಳನ್ನು ಮಂಜೂರು ಮಾಡಿಕೊಡಲು ರೂ.10,000/–ಗಳ ಲಂಚದ ಹಣಕ್ಕೆ ಒತ್ತಾಯಿಸಿದ್ದು, ಅದಕ್ಕೆ ದೂರುದಾರರು ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ, 10,000/– ರೂ.ಗಳನ್ನು ಕೊಟ್ಟರಿ ಮುಂದೆ ಲೆಕ್ಕಾಚಾರ ಮಾಡೋಣ ಎಂದು ತಿಳಿಸಿರುತ್ತಾರೆ. ದೂರುದಾರರಿಗೆ ಲಂಚವನ್ನು ಕೊಡಲು ಇಷ್ಟವಿಲ್ಲದೇ ಇರುವುದರಿಂದ, ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii. ದಿನಾಂಕ: 14/09/2017 ರಂದು ಬೆಳಿಗ್ಗೆ 10–15 ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಕಾರಣ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಮಂಡ್ಯ ಜಿಲ್ಲೆ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 08/2017 ರಲ್ಲಿ ಕಲಂ 7 ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ, ದಿನಾಂಕ: 14/09/2017ರಂದು ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ಪ್ರಕಾಶ್ ಎನ್. 2) ಶ್ರೀ ರಾಘವೇಂದ್ರ ಟಿ. (ನೆರಳು ಸಾಕ್ಷಿ)ಇವರುಗಳನ್ನು ಬರಮಾಡಿಕೊಂಡು, ತನಿಖಾಧಿಕಾರಿಗಳು ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ, ದೂರುದಾರರ ದೂರಿನ ಮೇರೆಗೆ ಕೇಸ್ ದಾಖಲು ಮಾಡಿರುವ ವಿಚಾರ ತಿಳಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು, ಅದರಲ್ಲಿನ ಸಾರಾಂಶವನ್ನು ತಿಳಿದುಕೊಳ್ಳಲು ಹೇಳಿರುತ್ತಾರೆ. ದೂರುದಾರರು ದೂರಿನಲ್ಲಿ ಮಾಡಿರುವ ಆರೋಪಗಳ ಬಗ್ಗೆ ಪಂಚರು ಮತ್ತೊಮ್ಮೆ ದೂರುದಾರರಿಂದ ಕೇಳಿ ಖಾತ್ರಿ ಮಾಡಿಕೊಂಡಿರುತ್ತಾರೆ. ದೂರುದಾರರು ಪಂಚರ ಸಮಕ್ಷಮ ತಮ್ಮ ಮೊಬೈಲ್‌ನ್ನು ಹಾಜರುಪಡಿಸಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡಾಟಾ ಕೇಬಲ್ ಮೂಲಕ ಸಂಪರ್ಕಿಸಿ ಅದರಲ್ಲಿಯ ಧ್ವನಿ ಸುರಳಿಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಧೃಢಪಟ್ಟಿರುತ್ತದೆ. ಸದರಿ ಸಂಭಾಷಣೆಯನ್ನು ಲ್ಯಾಪ್ ಟಾಪ್‌ನಿಂದ 3–ಸಿಡಿಗಳಿಗೆ ವರ್ಗಾಯಿಸಿರುತ್ತಾರೆ. ನಂತರ

ಲಂಚ ನೀಡಲು ತಂದ (ರೂ.2,000/- ಮುಖಬೆಲೆಯ 05-ನೋಟುಗಳು) ಒಟ್ಟು 10,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ಮತ್ತು ಮೌಲ್ಯವನ್ನು ಪಂಚ-1ರವರು ಪರಿಶೀಲಿಸಿ ಹೇಳಿದ್ದು, ಪಂಚ-2ರವರು ಅವುಗಳ ನಂ. ಮತ್ತು ಮೌಲ್ಯವನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ-1 ಪ್ರಕಾಶ್‌ರವರು ಪಂಚ ಸಾಕ್ಷಿ-2ರವರು ದೂರುದಾರರ ಅಂಗ ಶೋಧನೆ ಮಾಡಿದ ನಂತರ ಫಿನಾಫ್ತಲೀನ್ ಪೌಡರನ್ನು ಸವರಿದ ರೂ.10,000/-ಗಳನ್ನು ಎದುರುದಾರರು ಧರಿಸಿದ್ದ ಶರ್ಟಿನ ಎಡಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸಿಬ್ಬಂದಿಯಿಂದ ಎರಡು ಪ್ರತ್ಯೇಕವಾದ ಬಟ್ಟಲುಗಳಲ್ಲಿ ಸೋಡಿಯಮ್ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಪಂಚ ಸಾಕ್ಷಿ-1 ಪ್ರಕಾಶ್‌ರವರ ಎರಡೂ ಕೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತನ್ನ ಮುಖವನ್ನು ಕರವಸ್ತ್ರದಿಂದ ಒರೆಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡ್‌ನ್ನು ನೀಡಿ ಅದನ್ನು ಉಪಯೋಗಿಸುವ ರೀತಿ ತಿಳಿಸಿ ಹಾಗೂ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು, ನೆರಳು ಸಾಕ್ಷಿಯಾದ ಪಂಚ-2 ರಾಘುವೇಂದ್ರರವರಿಗೆ ದೂರುದಾರರು ಎದುರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ಪಂಚರು, ದೂರುದಾರರು ಹಾಗೂ ಸಿಬ್ಬಂದಿಯವರು ತಮ್ಮ ತಮ್ಮ ಕೈಗಳನ್ನು ಶುದ್ಧವಾಗಿ ಸೋಪಿನಿಂದ ನೀರಿನಲ್ಲಿ ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ಹಂತ ಹಂತವಾಗಿ ಛಾಯಾಚಿತ್ರ ತೆಗೆಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿನಾಂಕ: 14.09.2017ರಂದು ಬೆಳಿಗ್ಗೆ 11-15 ಗಂಟೆಯಿಂದ ಮಧ್ಯಾಹ್ನ 01-15 ಗಂಟೆಯವರೆಗೆ ಮಂಡ್ಯ ಜಿಲ್ಲೆಯ ಎಸಿಬಿ ಕಚೇರಿಯಲ್ಲಿ ಮಾಡಿಸಿದ ಪ್ರಾಯೋಗಿಕ ಪಂಚನಾಮೆಯನ್ನು ಬೆರಳಚ್ಚು ಮಾಡಿಸಿರುತ್ತಾರೆ.

iv. ಅದೇ ದಿನ ಅಂದರೆ 14/09/2017ರ ಮಧ್ಯಾಹ್ನ 01-30 ಗಂಟೆಗೆ ದೂರುದಾರರು, ತನಿಖಾಧಿಕಾರಿಗಳು, ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಇಲಾಖಾ ವಾಹನಗಳಲ್ಲಿ ಹೊರಟಿದ್ದು, ದೂರುದಾರರು ಎದುರುದಾರರಿಗೆ ಕರೆ ಮಾಡಿದಾಗ, ಎದುರುದಾರರು ಮಂಡ್ಯದ ಮೈಸೂರು-ಬೆಂಗಳೂರು ರಸ್ತೆ, ಡಿಸಿ ಪಾರ್ಕನಲ್ಲಿರುವ ವಿಶ್ವೇಶ್ವರಯ್ಯ ಪ್ರತಿಮೆ ಎದುರಿನಲ್ಲಿರುವ ಶ್ರೀರಾಜ್ ರೆಸ್ಟೋರೆಂಟ್ ಬಳಿ ಇದ್ದು, ಅಲ್ಲಿಗೆ ಬರುವಂತೆ ತಿಳಿಸಿದ ಮೇರೆಗೆ ವಾಹನದಲ್ಲಿ ಶ್ರೀರಾಜ್ ರೆಸ್ಟೋರೆಂಟ್ ಬಳಿ ಬಂದು, ತನಿಖಾಧಿಕಾರಿಗಳು

ವಾಹನದಲ್ಲಿದ್ದ ದೂರುದಾರರು ಹಾಗೂ ನೆರಳು ಸಾಕ್ಷಿ ರಾಘುವೇಂದ್ರರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ದೂರುದಾರರು ಪಂಚ-2ರವರೊಂದಿಗೆ ಶ್ರೀರಾಜ್ ರೆಸ್ಟೋರೆಂಟ್ ಒಳಗೆ ಹೋಗಿ ಎದುರುದಾರರನ್ನು ಭೇಟಿ ಮಾಡಿದ್ದು, ಎದುರುದಾರರು ದೂರುದಾರರಿಂದ ಫಿನಾಫ್ತಲೀನ್ ಲೇಪಿತ ಲಂಚದ ಹಣವನ್ನು ಪಡೆದುಕೊಂಡು ನೋಟುಗಳನ್ನು ತನ್ನ ಎರಡು ಕೈಗಳಿಂದ ಎಣಿಸಿ ತಮ್ಮ ಶರ್ಟಿನ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ಹೊರಗಡೆ ಬಂದು ತಮ್ಮ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಿರುತ್ತಾರೆ ಹಾಗೂ ಗಾಬರಿಯಲ್ಲಿ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಳ್ಳುವುದನ್ನು ಮರೆತವೆಂದು ವಾಯ್ಸ್ ರೆಕಾರ್ಡ್‌ನ್ನು ವಾಪಸ್ಸು ನೀಡಿರುತ್ತಾರೆ.

v. ಆ ಸಂದರ್ಭದಲ್ಲಿ ತನಿಖಾಧಿಕಾರಿಗಳು ಪಂಚರೊಂದಿಗೆ ಎದುರುದಾರರು ಇದ್ದ ಸ್ಥಳಕ್ಕೆ ಬಂದು, ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ದೂರುದಾರರು ಹಾಗೂ ಪಂಚ ಸಾಕ್ಷಿ-2ರವರು ತನಿಖಾಧಿಕಾರಿಗಳಿಗೆ ನಡೆದ ವಿದ್ಯಾಮಾನವನ್ನು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸಿಬ್ಬಂದಿಯಿಂದ ಎರಡು ಪ್ರತ್ಯೇಕವಾದ ಬಟ್ಟಲುಗಳಲ್ಲಿ ಸೋಡಿಯಮ್ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ದೂರುದಾರರಿಂದ ಪಡೆದ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ, ಎದುರುದಾರರು ಧರಿಸಿದ್ದ ಶರ್ಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುವುದಾಗಿ ತಿಳಿಸಿ ಜೇಬಿನಿಂದ ಹಣವನ್ನು ಹೊರತೆಗೆದು ಹಾಜರುಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಪಂಚರು ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ತನಿಖಾಧಿಕಾರಿಗಳು ಎದುರುದಾರರಿಗೆ ಬದಲೀ ಟಿ-ಶರ್ಟ್ ವ್ಯವಸ್ಥೆ ಮಾಡಿ, ಸದರಿ ಶರ್ಟ್‌ನ್ನು ಪ್ರತ್ಯೇಕವಾದ ಬಟ್ಟಲಿನಲ್ಲಿ ತಯಾರಿಸಿದ್ದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ ಸದರಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ಸದರಿ ಶರ್ಟ್‌ನ್ನು ಹಾಗೂ ಹಣವನ್ನು ಜಪ್ತು ಮಾಡಿಕೊಂಡು ಬೇರೆ ಬೇರೆ ಕವರ್‌ನಲ್ಲಿ ಹಾಕಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ

ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ತಾನು ಮಾದೇಗೌಡ ಕೊಪ್ಪಲು ಗ್ರಾಮದ ಜವರೇಗೌಡ ಎಂಬುವವರಿಂದ 10,000/- ರೂ.ಗಳ ಸಾಲದ ಹಣವನ್ನು ತಮ್ಮ ಕಚೇರಿಯ ಅಟೆಂಡರ್ ಎಮ್. ಡಿ. ಮನುರವರಿಗೆ ಸಂಬಳ ಕೊಟ್ಟಿಲ್ಲದೇ ಇರುವುದರಿಂದ ಸದರಿಯವರಿಗೆ ನೀಡಲು ಸಾಲ ಕೊಡಿ ಎಂದು ಕೇಳಿ ಕೊಂಡಿದ್ದೆ, ಅವರು ಮಂಡ್ಯಕ್ಕೆ ಬನ್ನಿ ಕೊಡುತ್ತೇನೆ ಎಂದು ತಿಳಿಸಿ, ಹಣ ಕೊಡುವಾಗ ಈ ರೀತಿ ಮಾಡಿರುತ್ತಾರೆ. ಏಕೆಂದರೆ ಇವರ ಅಣ್ಣ ಪುಟ್ಟಸ್ವಾಮಿ ಎಂಬುವವರು ನಮ್ಮ ಪಂಚಾಯಿತಿ ಮಾಜಿ ಅಧ್ಯಕ್ಷರು, ಹಾಲಿ ಸದಸ್ಯರು, ಅವರಿಗೂ ಈಗಿನ ಅಧ್ಯಕ್ಷರಾದ ಶ್ರೀ. ಡಿ. ಚಿಕ್ಕಯ್ಯ ಎಂಬುವವರಿಗೆ ಕಚೇರಿಯಲ್ಲಿ ಗಲಾಟೆಯಾಗಿ ಪುಟ್ಟಸ್ವಾಮಿ ಎಂಬುವವರ ಮೇಲೆ ಕೇಸ್ ದಾಖಲಾಗಿದ್ದು, ಆ ಸೇಡಿನ ಮೇಲೆ ಈ ಕೆಲಸ ಮಾಡಿರುತ್ತಾರೆ. ಈ ಹಣದ ಬಗ್ಗೆ ಬೇರೆ ಯಾವುದೇ ಕೈ ಕೆಲಸ ಇರುವುದಿಲ್ಲವೆಂದು" ಸಮಜಾಯಿಷಿಯನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರವಾಣಿ ಮಾಡಿ ಎದುರುದಾರರ ಮೇಲಾಧಿಕಾರಿಗಳಾದ ಶ್ರೀ ಮಹದೇವ್, ಸಹಾಯಕ ನಿರ್ದೇಶಕರು, ಗ್ರಾಮೀಣ ಉದ್ಯೋಗ, ತಾಲ್ಲೂಕು ಪಂಚಾಯಿತಿ, ಮಂಡ್ಯ, ರವರಿಗೆ ಸ್ಥಳಕ್ಕೆ ಬರುವಂತೆ ತಿಳಿಸಿದಾಗ, ಅವರು ಸ್ಥಳಕ್ಕೆ ಬಂದಿದ್ದು, ಅವರಿಗೆ ಎದುರುದಾರರು ಟ್ರಾಪ್‌ಗೆ ಒಳಪಟ್ಟ ವಿಚಾರ ತಿಳಿಸಿ ಸಿಡಿಯಲ್ಲಿದ್ದ ಧ್ವನಿಯನ್ನು ಲ್ಯಾಪ್ ಟಾಪ್‌ಗೆ ಹಾಕಿ ಕೇಳಿಸಿದ್ದು, ಶ್ರೀ ಮಹದೇವ್ ರವರು ಅದರಲ್ಲಿದ್ದ ಒಂದು ಧ್ವನಿಯನ್ನು ಎದುರುದಾರರ ಧ್ವನಿಯೆಂದು ಗುರುತಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ಶ್ರೀ. ಆರ್. ಮಹದೇವ್, ಸಹಾಯಕ ನಿರ್ದೇಶಕರು, ಗ್ರಾಮೀಣ ಉದ್ಯೋಗ, ತಾಲ್ಲೂಕು ಪಂಚಾಯಿತಿ, ಮಂಡ್ಯರವರಿಗೆ ದೂರುದಾರರಿಗೆ ಸಂಬಂದಿಸಿದ ಕಡತವನ್ನು ಹಾಜರುಪಡಿಸಲು ತಿಳಿಸಿದಾಗ, ಸದರಿಯವರು ದಾಖಲಾತಿಗಳು ಮಾರನಚಾಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಇರುವುದಾಗಿ ತಿಳಿಸಿದ್ದರಿಂದ ತನಿಖಾಧಿಕಾರಿಗಳು ಮುಂದಿನ ತನಿಖೆಯನ್ನು ಮಾರನಚಾಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಮುಂದುವರಿಸುವುದಾಗಿ ತಿಳಿಸಿ, ರಾಜ್ ರೆಸ್ಟೋರೆಂಟ್‌ನಲ್ಲಿ ಮಧ್ಯಾಹ್ನ 2-15 ಗಂಟೆಯಿಂದ ಮಧ್ಯಾಹ್ನ 3-00 ಗಂಟೆಯವರೆಗೆ ನಡೆದ ವಿದ್ಯಾಮಾನಗಳನ್ನು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ಟ್ರಾಪ್ ಸಿಬ್ಬಂದಿಯೊಂದಿಗೆ ಮಧ್ಯಾಹ್ನ 3-45 ಗಂಟೆಗೆ ಮಾರನಚಾಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ಬಂದಿದ್ದು, ಅಲ್ಲಿ ಆರ್. ಮಹದೇವ್, ಸಹಾಯಕ ನಿರ್ದೇಶಕರು, ಗ್ರಾಮೀಣ ಉದ್ಯೋಗ, ತಾಲ್ಲೂಕು ಪಂಚಾಯಿತಿ, ಮಂಡ್ಯರವರು ದೂರುದಾರರಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಜೆರಾಕ್ಸ್ ಮಾಡಿಸಿ ಆರ್. ಮಹದೇವ, ರವರಿಂದ ಧೃಡೀಕರಿಸಿಕೊಂಡು ತಮ್ಮ ವಶಕ್ಕೆ ಪಡೆದಿರುತ್ತಾರೆ. ಈ ಬಗ್ಗೆ ಮಧ್ಯಾಹ್ನ 4-00 ಗಂಟೆಯಿಂದ ಸಂಜೆ 5-00 ಗಂಟೆಯವರೆಗೆ ಮಾರನಚಾಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಉಕ್ತಲೇಖನ ನೀಡಿ ಲ್ಯಾಪ್ ಟಾಪ್‌ನಲ್ಲಿ ಮಹಜರ್‌ನ್ನು ಬೆರಳಚ್ಚು ಮಾಡಿಸಿ, ಅಲ್ಲಿ ಮುಂದಿನ ಪ್ರಕ್ರಿಯೆ ನಡೆಸಲು ಸಾಕಷ್ಟು ಗಾಳಿ ಬೆಳಕು ವ್ಯವಸ್ಥೆ ಇಲ್ಲದ ಕಾರಣ, ಮುಂದಿನ ನಡವಳಿಕೆ ನಡೆಸಲು ದಾಳಿ ಸಿಬ್ಬಂದಿಯೊಂದಿಗೆ ಮಂಡ್ಯ ಎಸಿಬಿ ಕಚೇರಿಗೆ ಸಂಜೆ 5-30 ಗಂಟೆಗೆ ಬಂದಿರುತ್ತಾರೆ.

ನಂತರ ಮಂಡ್ಯ ಎಸಿಬಿ ಕಚೇರಿಯಲ್ಲಿ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಯನ್ನು ಸಂಗ್ರಹಿಸುವ ಅವಶ್ಯಕತೆ ಇದ್ದು, ಅದರಂತೆ ಪಂಚರ ಸಮಕ್ಷಮ ಟ್ರ್ಯಾಪ್ ಪೂರ್ವದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ದೂರುದಾರರಿಂದ ಹಾಗೂ ಎದುರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ. ಲ್ಯಾಪ್ ಟಾಪ್‌ನ ಮೂಲಕ ಸಿಡಿಗೆ ವರ್ಗಾಯಿಸಿರುತ್ತಾರೆ. ದೂರುದಾರರು ಟ್ರ್ಯಾಪ್ ಸಮಯದಲ್ಲಿ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಳ್ಳುವುದನ್ನು ಮರೆತವೆಂದು ವಾಯ್ಸ್ ರೆಕಾರ್ಡ್‌ನ್ನು ವಾಪಸ್ಸು ನೀಡಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ಹಂತ ಹಂತವಾಗಿ ಛಾಯಾಚಿತ್ರ ತೆಗೆಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 14/09/2017 ರಂದು ಮಂಡ್ಯ ಎಸಿಬಿ ಕಚೇರಿಯಲ್ಲಿ ಸಂಜೆ 05–45 ಗಂಟೆಯಿಂದ ರಾತ್ರಿ 07–15 ಗಂಟೆಯವರೆಗೆ ಟ್ರ್ಯಾಪ್ ಪ್ರಕ್ರಿಯೆಯ ಕ್ರಮವನ್ನು ಕಂಪ್ಯೂಟರ್ ಮೂಲಕ ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು, ಲಂಚದ ಹಣವನ್ನು ಜಫ್ತು ಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

x. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ. ಎದುರುದಾರರ ಎರಡೂ ಕೈಬೆರಳುಗಳನ್ನು ತೊಳೆಯಿಸಿದ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಎದುರುದಾರರು ಧರಿಸಿದ್ದ ಟಿ–ಶರ್ಟ್‌ನಲ್ಲಿ ಫಿನಾಪ್ತೀಲೀನ್ ಅಂಶವು ಪತ್ತೆಯಾಗಿರುವುದು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಿಂದ ಧೃಢಪಟ್ಟಿರುತ್ತದೆ. ತನಿಖಾಧಿಕಾರಿಗಳು ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಎದುರುದಾರರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

xi. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

xii. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ವರದಿ, ಧ್ವನಿ ವಿಶ್ಲೇಷಣಾ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

xiii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 24/11/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಪರಿವೀಕ್ಷಣಾ ಟಿಪ್ಪಣಿಯಲ್ಲಿ ಹೇಳಿದ ಅವರ ಮೇಲಿನ ಅಪಾದನೆಗಳನ್ನು ಅಲ್ಲಗಳೆದಿದ್ದು ಅಲ್ಲದೆ, ಅವುಗಳನ್ನು ಅಭಿಯೋಜನೆಯವರು ರುಜುವಾತು ಪಡಿಸಬೇಕೆಂದು ಹೇಳಿ, ಮುಂದುವರೆದು, ತಾನು ಮಾರನಚಾಕನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಪಿಡಿಓ ಅಂತ ಕೆಲಸಮಾಡುತ್ತಿದ್ದಾಗ ದೂರುದಾರ-ಜವರೇಗೌಡನ ಅಣ್ಣನಾದ ಪುಟ್ಟಸ್ವಾಮಿ, ಭಾರತಿ, ರಮೇಶ ಮತ್ತು ರಾಜು ಎನ್ನುವವರ ವಿರುದ್ಧ ದಿ:11/07/2017ರಂದು ಬೆಳಿಗ್ಗೆ 11-30 ಗಂಟೆಯಲ್ಲಿ ತಾನು ಹಾಗೂ ತನ್ನ ಇತರ ಸಿಬ್ಬಂದಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸದರಿಯವರುಗಳು ವಾಟರ್‌ಮೆನ್ ಭಾರತಿಯವರಿಗೆ 9-ತಿಂಗಳಿಂದ ಏಕೆ ಸಂಬಳ ಮಾಡಿಲ್ಲ ಎಂದು ಏಕಾಏಕಿ ತನ್ನನ್ನು ಅಡ್ಡ ಹಾಕಿ ಸರ್ಕಾರಿ ಕೆಲಸ ಮಾಡದಂತೆ ಅಡ್ಡಿಪಡಿಸಿ, ಬಾಯಿಗೆ ಬಂದಂತೆ ಬೈದು ಮುಂತಾಗಿ, ಗಲಾಟೆ ಮಾಡಿದ್ದರಿಂದ ಅವರುಗಳ ಮೇಲೆ ತಾನು ಶಿವಳ್ಳಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಸದರಿ ದೂರಿನ ಮೇಲೆ ತನಿಖೆಯಾಗಿ ಅವರುಗಳ ಮೇಲೆ ಜೆಎಮ್‌ಎಫ್‌ಸಿ ನ್ಯಾಯಾಲಯ, ಮಂಡ್ಯದಲ್ಲಿ ಸಿ.ಸಿ.ನಂ.160/2018ರಲ್ಲಿ ಪ್ರಕರಣ ದಾಖಲಾಗಿತ್ತು. ಸದರಿ ಪ್ರಕರಣದಲ್ಲಿ ತಾನು ತನ್ನ ಸಾಕ್ಷ್ಯವನ್ನು ಸಹಾ ನೀಡಿದ್ದೆ, ಈ ಕಾರಣದಿಂದ ತನ್ನ ಮೇಲೆ ದ್ವೇಶ ಸಾಧಿಸುವ ಉದ್ದೇಶಕ್ಕಾಗಿ ಸುಳ್ಳು ಫಿರ್ಯಾದನ್ನು ನೀಡಿರುತ್ತಾರೆ. ತಾನು ದೂರುದಾರರಿಂದ ಯಾವುದೇ ರೀತಿಯ ಲಂಚವನ್ನು ಅಪೇಕ್ಷಿಸಿರುವುದಿಲ್ಲ ಮತ್ತು ಬೇಡಿಕೆ ಇಟ್ಟಿರುವುದಿಲ್ಲ. ಈ ಸಂಬಂಧ ತಾನು ದಿ:14/09/2017ರಂದು ತನ್ನ ಲಿಖಿತ ಹೇಳಿಕೆಯನ್ನು ತನಿಖಾಧಿಕಾರಿಗಳಿಗೆ ಬರೆದುಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಎದುರುದಾರರು ಮುಂದುವರೆದು, ತಾನು ತನ್ನ ಸೇವಾ ಅವಧಿಯಲ್ಲಿ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿಕೊಂಡು ಬಂದಿದ್ದು, ಮೇಲೆ ಹೇಳಿದ ಕಾರಣದಿಂದಾಗಿ ತನ್ನ ವಿರುದ್ಧ ಪಿತೂರಿಯನ್ನು ಮಾಡಿ, ತನ್ನ ಪ್ರತಿಷ್ಠೆ ಮತ್ತು ವೃತ್ತಿಗೆ ಧಕ್ಕೆಯನ್ನುಂಟು ಮಾಡಿರುತ್ತಾರೆ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ. ಹಾಗೂ ತಮ್ಮ ಸಮಜಾಯಿಷಿಯ ಜೊತೆಗೆ ಮಂಡ್ಯ ಜೆಎಮ್‌ಎಫ್‌ಸಿ ನ್ಯಾಯಾಲಯದ ಸಿ.ಸಿ.ನಂ.160/2018ರಲ್ಲಿಯ ಆರ್ಡರ್ ಷೀಟ್‌ನ ಧೃಢೀಕೃತ ನಕಲು, ಸಾಕ್ಷಿದಾರರುಗಳ ಹೇಳಿಕೆಯ ಧೃಢೀಕೃತ ನಕಲು ಹಾಗೂ ನಿಶಾನೆಯಾದ ದಾಖಲಾತಿಗಳ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ

ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

30/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.